# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 519+520

ಉತ್ತರಿಸಬೇಕಾದ ದಿನಾಂಕ : 15-09-2022

ಸದಸ್ಯರ ಹೆಸರು : ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) ಮತ್ತು ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ನೌಕರರಿಗೆ ನೀಡುವ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅಧಿಕಾರಿ/ನೌಕರರನ್ನು ಆಯ್ಕೆ ಮಾಡಲು ನಿಗಧಿಪಡಿಸಿರುವ ಮಾನ ದಂಡಗಳೇನು (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ / ನೌಕರರ ಕಾರ್ಯಕ್ಷಮತೆ / ಉತ್ಪಾದಕತೆಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನಾಗರಿಕ ಸೇವಾ ನೌಕರರುಗಳಿಗೆ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಲು ಸರ್ಕಾರವು ನೀತಿ, ನಿರ್ಧಾರಗಳನ್ನು ಕೈಗೊಂಡಿರುತ್ತದೆ. ಈ ಕುರಿತು ಹೊರಡಿಸಿರುವ ಆದೇಶ / ಸುತ್ತೋಲೆಗಳನ್ವಯ ಪ್ರಶಸ್ತಿಗೆ ಆಯ್ಕೆ ಮಾಡಲು ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಿದೆ:-<br><br>1. ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ಯನ್ನು ತರುವ ಮೂಲಕ ನಾಗರಿಕರಿಗೆ ಗುಣಮಟ್ಟದ ಸೇವೆಯ ವಿತರಣೆ.<br><br>2. ನಾಗರಿಕ ಸೇವಾ ವ್ಯವಸ್ಥೆಯಲ್ಲಿ ಗುಣಾತ್ಮಕ, ನಾಗರಿಕ ಸ್ನೇಹಿ ಮತ್ತು ಭ್ರಷ್ಟಾಚಾರ ರಹಿತ ವಾತಾವರಣ ನಿರ್ಮಾಣ.<br><br>3. ಮೌಲ್ಯವರ್ಧಿತ ಸೇವೆ, ವೃದ್ಧಿ, ಮುಂದಾಳತ್ವ ಮತ್ತು ಚಲನಶೀಲಗಳ ರಚನೆ.<br><br>4. ನಾಗರಿಕರ ಅವಶ್ಯಕತೆಗನುಗುಣವಾಗಿ ವಿನೂತನ ಪದ್ಧತಿ ಅಳವಡಿಸುವುದು.<br><br>5. ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅತ್ಯುನ್ನತ ಕಾರ್ಯನಿರ್ವಹಣೆ.<br><br>6. ಸಹಜ ಕಾರ್ಯನಿರ್ವಹಣೆಯೊಂದಿಗೆ ನಾಗರಿಕರಿಗೆ ವಿಶೇಷ ಸಂದರ್ಭಗಳಲ್ಲಿ ವಿಶೇಷ ರೀತಿಯ ಸೇವೆಗಳನ್ನು ಒದಗಿಸಿದವರನ್ನು ಮತ್ತು ಕಛೇರಿ ಪರಿಸರದಲ್ಲಿ ವಿಶೇಷ, ವಿಭಿನ್ನ ಸಾಧನೆಯನ್ನು ಮಾಡುವುದು.<br><br>7. ಇಲಾಖೆ/ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ತಂದು ಅದ್ಭುತವಾದ ರೀತಿಯಲ್ಲಿ ಗಣನೀಯ ಕಾರ್ಯನಿರ್ವಹಣೆ.<br><br>8. ವಿನೂತನತೆಯನ್ನು ಕಾರ್ಯರೂಪಕ್ಕೆ ತರುವುದು ಮತ್ತು ರಚನಾತ್ಮಕ ರೀತಿಯಲ್ಲಿ ಮುಂದಾಳತ್ವ ವಹಿಸುವಿಕೆ, ನಾಗರಿಕರಿಗೆ ನೀಡುವ ಸೇವೆಯಲ್ಲಿ ಗಮನಾರ್ಹ ಸುಧಾರಣೆಯನ್ನು ಮಾಡುವುದು. |

| | | |
|---|---|---|
| ● | | 9. ದೀರ್ಘ ಸಮಯದ ಫಲಿತಾಂಶ ಸಾಧನೆ.<br>10. ನಿಗದಿತ ಫಲಿತಾಂಶ ಸಾಧನೆಗೆ ಸರಳೀಕೃತ ಕಾರ್ಯವಿಧಾನ ವ್ಯವಸ್ಥೆ.<br>11. ಸರ್ಕಾರ/ಸಾರ್ವಜನಿಕರ ಹಣದ ಉಳಿತಾಯ. |
| ಆ. | ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ ಹಾಗೂ ವಿಧಾನಸಭೆ ಸಚಿವಾಲಯದ ನೌಕರರನ್ನು ಈ ಪ್ರಶಸ್ತಿಗೆ ಪರಿಗಣಿಸದಿರಲು ಕಾರಣಗಳೇನು: ಅವರುಗಳು ಸರ್ಕಾರಿ ನೌಕರರಲ್ಲವೇ? | ಕರ್ನಾಟಕ ವಿಧಾನ ಮಂಡಲ ನೌಕರರು ಸಾಂವಿಧಾನಿಕ ಸಂಸ್ಥೆಯಾದ ಶಾಸಕಾಂಗದ ನೌಕರರಾಗಿರುತ್ತಾರೆ. ಇವರ ನೇಮಕಾತಿ ಮತ್ತು ಸೇವಾ ಷರತ್ತುಗಳು ಮಾನ್ಯ ಸಭಾಪತಿ / ಸಭಾಧ್ಯಕ್ಷರು ರಚಿಸಿರುವ ನಿಯಮಗಳಡಿ ನಿಯಂತ್ರಿಸಲ್ಪಡುತ್ತದೆ. ಈ ಹಿನ್ನಲೆಯಲ್ಲಿ ವಿಧಾನ ಮಂಡಲದ ನೌಕರರನ್ನು ರಾಜ್ಯ ಸರ್ಕಾರದ ನಾಗರಿಕ ಸೇವಾ ನೌಕರರುಗಳೆಂದು ಪರಿಗಣಿಸಲು ಬರುವುದಿಲ್ಲವಾದ್ದರಿಂದ ಸರ್ವೋತ್ತಮ ಸೇವಾ ಪ್ರಶಸ್ತಿ ಸಂಬಂಧಿಸಿದ ಆದೇಶ / ಸುತ್ತೋಲೆಗಳು ಇವರಿಗೆ ಅನ್ವಯಿಸುವುದಿಲ್ಲ. |
| ಇ. | ಮುಂದಿನ ಸಾಲಿನಿಂದ ವಿಧಾನ ಪರಿಷತ್ತಿನ ಸಚಿವಾಲಯ ಹಾಗೂ ವಿಧಾನಸಭೆ ಸಚಿವಾಲಯಗಳಿಗೆ ತಲಾ ಒಂದೊಂದು ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ನಿಗದಿಪಡಿಸಿ ಆದೇಶ ವನ್ನು ಹೊರಡಿಸಲಾಗುವುದೇ? | ಮೇಲಿನ (ಆ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ:** ಸಿಆಸುಇ (ಆಸು) 108 ಇಆಸು 2022

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ